೨) ತುಮಕೂರು ಜಿಲ್ಲೆಯಲ್ಲಿ ಮೆದುಳು ಜ್ವರದಿಂದ ಹನ್ನೆರಡುಜನರು ಸಾವಿಗೀಡಾಗಿರುವುದು

ಶ್ರೀ ಬಿ. ಗಂಕ್ಕಪ್ಪ.—ಮಾನ್ಯ ಅಧ್ಯಕ್ಷರೇ ೧೯೪೮ರ ಜನವರಿಯಿಂದ ಏಪ್ರಿಲ್‌ವರೆಗೆ ಕಾಲರಾ ಮೆದುಳು ಜ್ವರ ಹಾಗೂ ಡಡಾರ ಕಾಯಿಲೆಯಿಂದ ತುಮಕೂರು ಜಿಲ್ಲೆಯಲ್ಲಿ ಹನ್ನೆರಡು ಜನ ಸಾವಿಗೀಡಾದ ವಿಚಾರದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ,

೧೯೪೮ನೇ ಸಾಲಿನ ಜನವರಿಯಿಂದ ಏಪ್ರಿಲ್ ಅಂತ್ಯದವರೆಗೆ ತುಮಕೂರು ಜಿಲ್ಲೆಯಲ್ಲಿ ಅತಿಸಾರ ಕರಳುಬೇನೆ, ಮಿದುಳು ಜ್ವರ ಮತ್ತು ಡಡಾರ ರೋಗಗಳ ವಿವರಗಳು ಕೆಳಕಂಡಂತೆ ಇವೆ.

I ಅತಿಸಾರ/ಕಾಲರ

ಸಂಖ್ಯೆ	ತಾಲ್ಲೂಕು	ಪ್ರಾಥಮಿಕ ಆರೋಗ್ಯ ಕೇಂದ್ರ		ತಂತ್ರಾದ ಗ್ರಾಮಗಳ ಸಂಖ್ಯೆ	ಪ್ರಕರಣಗಳು	ಸಾವುಗಳು
೧	ತುಮಕೂರು	೧	ಕ್ಯಾತಸಂದ್ರ	೩	೯	೧
೨	ಪಾವಗಡ	೨	ಪಾವಗಡ	೧	೭	೧
		೩	ಕೋಟಿಗಂಡ್ಡೆ	೧	೯	...
೩	ಕುಣಿಗಲ್	೪	ಕುಣಿಗಲ್	೧	೨	...
೪	ಶಿರ	೫	ಬರಗೂರು	೩	೩೨	
		೬	ಕಳ್ಳಂಬೆಳ್ಳ	೧	೧೫	೨
೫	ತುರುವೆಕೆರೆ	೭	ಮಾಯಸಂದ್ರ	೩	೪೩	೨
೬	ತಿಪಟೂರು	೮	ನೊಣವಿನ ಕೆರೆ	೨	೨೭	...
			ಜುಮ್ಲಾ	೧೫	೧೪೪	೬

II ಮೆದುಳುಜ್ವರ

೧	ಶಿರ	೧	ಶಿರ	೧	೧	೧
೨	ತುಮಕೂರು	೨	ನಾಗವಳ್ಳಿ	೧	೧	...
೩	ಕುಣಿಗಲ್	೩	ಕುಣಿಗಲ್	೧	೧	...
			ಜುಮ್ಲಾ	೩	೩	೧

III ಡಡಾರ

ತುಮಕೂರು ಜಿಲ್ಲೆ	ಪ್ರಕರಣಗಳು	ಸಾವುಗಳು
	೩೫೪	೬

ಈ ಪ್ರಕರಣಗಳು ತುಮಕೂರು ನಗರದಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಕೊಡ್ಲಾಪುರ, ಕ್ಯಾತಸಂದ್ರ, ಗುಬ್ಬಿ, ಶಿರ, ಬರಗೂರು ಮತ್ತು ಕುಣಿಗಲ್ ಆಸ್ಪತ್ರೆಗಳಿಂದ ವರದಿಯಾಗಿರುತ್ತದೆ.

ಈ ರೋಗಗಳ ನಿಯಂತ್ರಣದ ಬಗ್ಗೆ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಧಿಕಾರಿಗಳ ಕಾರ್ಯಾಲಯದಿಂದ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

		ಸಂಖ್ಯೆ
೧	ಕಾಲರ ಚುಚ್ಚುಮದ್ದು ಕೊಟ್ಟಿರುವುದು	೫,೭೧೭
೨	ಥಡಾರ ಲಸಿಕೆ ಕೊಟ್ಟಿರುವುದು	೯,೧೮೦
೩	ಕ್ಲೋರಿನೇಷನ್ ಮಾಡಿದ ಭಾವಿಗಳು	೧೧೭
೪	ಕ್ರಿಮಿನಾಶಕ ಕ್ರಮ ತೆಗೆದುಕೊಂಡ ಮನೆಗಳು	೧೯೯
೫	ಕೀಟನಾಶಕ ಔಷಧಿ ಸಿಂಪಡಿಸಿದ ಮನೆಗಳು	೧೫೪

ಇದು ಅಲ್ಲದೆ ತೀವ್ರವಾದ ಸ್ಥಿತಿಯಲ್ಲಿದ್ದ ಪ್ರಕರಣಗಳನ್ನು ಆಸ್ಪತ್ರೆಗೆ ದಾಖಲು ಮಾಡಿ ಅಲ್ಲಿ ಸೂಕ್ತ ಚಿಕಿತ್ಸೆಯನ್ನು ಒದಗಿಸಲಾಗಿದೆ. ಇದಕ್ಕೆ ಬೇಕಾದ ಔಷಧಿಗಳು, ದ್ರಾವಣಗಳು ಮತ್ತು ಇತರ ಅಗತ್ಯವಿದ್ದ ವಸ್ತುಗಳನ್ನು ಹೆಚ್ಚುವರಿಯಾಗಿ ತುಮಕೂರು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಯವರ ಮೂಲಕ ಸರಬರಾಜು ಮಾಡಲಾಗಿದೆ ಅವುಗಳ ವಿವರ ಈ ಕೆಳಕಂಡಂತೆ ಇದೆ.

Date : 9-11-1987

1	D I H Q Tablets	20,000
2	Sulphadiazin Tablets	20,000
3	Septron Tablets	5,000
4	Tetraeycline Capsules	20,000
5	Metachloropromide Injection Vials	500
6	Normal Saline Bags	1,000
7	Drip sets	100
8	O R S Pockets	500
9	Phenyl cans	25
10	Bleaching Powder Bags	10

Date : 7-3-1988

1	D I H Q Tablets	50,000
2	Tetracyclin Caps	10,000
3	O. R. S. Pacluts	1,000
4	Bleaching Powder Bags	15
5	Dextrose Saline Bags	500
6	Normal Saline Bags	500
7	Drip Sets	500
8	Sulphadiazin Tablets	50,000

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಾದ ಮತ್ತು ಸಾಂಕ್ರಾಮಿಕ ರೋಗಗಳ ಜಂಟಿ ನಿರ್ದೇಶಕರು ಈ ರೋಗಗಳು ಸಂಭವಿಸಿರುವ ಕೆಲವು ಸ್ಥಳಗಳಿಗೆ ಭೇಟಿ ನೀಡಿ ಅದರ ಬಗ್ಗೆ ಮೇಲ್ವಿಚಾರಣೆ ನಡೆಯಿಸಿ ಸಿಬ್ಬಂದಿಯವರಿಗೆ ಸೂಕ್ತ ಮಾರ್ಗದರ್ಶನ ನೀಡಿರುತ್ತಾರೆ. ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಗೆ ಮತ್ತು ತುಮಕೂರು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಈ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಸೂಕ್ತ ಮಾಹಿತಿ ಗಳನ್ನು ಸುತ್ತೋಲೆಯ ಮುಖಾಂತರ ಕೊಡಲಾಗಿದೆ ಮತ್ತು ಈ ರೋಗಗಳು ಉಲ್ಬಣಿಸದಂತೆ ಮುಂಜಾಗ್ರತೆ ಕ್ರಮಗಳನ್ನು ಕೈಗೆಮಕೊಳ್ಳಲು ಎಚ್ಚರಿಕೆ ನೀಡಲಾಗಿದೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ತುಮಕೂರು ಜಿಲ್ಲೆ ನಾಗವಳ್ಳಿಯಲ್ಲಿ ದಡಾರ ರೋಗಕ್ಕೆ ತುತ್ತಾಗಿ ೩೮ ಮಕ್ಕಳು ಸತ್ತಿದ್ದಾರೆ. ತುಮಕೂರು ಜಿಲ್ಲೆಯು ಕೆಲವು ಕಡೆ ದಡಾರ, ಕಾಲರ, ಅತಿಸಾರ ಮತ್ತು ಮೆದುಳುಜ್ವರಗಳಂ ಒಂದಲ್ಲಾ ಒಂದು ಭಾಗದಲ್ಲಿ ಬಂದು ಕಾಡುತ್ತಿವೆ. ಕೇವಲ ಒಂದು ವರ್ಷದಲ್ಲಿ ದಡಾರ ರೋಗ ಬಂದು ೬೦ ಮಕ್ಕಳು ಸತ್ತಿವೆ. ಈ ಕಾಯಿಲೆಯು ಜನವರಿ ತಿಂಗಳಲ್ಲೇ ಪ್ರಾರಂಭವಾಗಿದ್ದರೂ ಸರಿಯಾದ ರೀತಿಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳಂ ತೆಗೆದುಕೊಂಡಿಲ್ಲ. ಆರೋಗ್ಯ ಇಲಾಖೆಯು ಒಂದು ಬೇಜವಾಬ್ದಾರಿಯುತವಾದ ಇಲಾಖೆಯಾಗಿದೆ. ಇದುವರೆಗೆ ತುಮಕೂರು ಜಿಲ್ಲೆಯ ೬ ತಾಲ್ಲೂಕುಗಳಲ್ಲಿ ಈ ರೋಗಗಳು ಹರಡಿವೆಯೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈಗ ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೂ ಈ ರೋಗಗಳು ಹರಡುವುದಕ್ಕೆ ಪ್ರಾರಂಭವಾಗಿದೆ. ಇದೇ ರೀತಿ ಬಿಟ್ಟರೆ ಇಡೀ ಜಿಲ್ಲೆಯಲ್ಲಿ ಈ ರೋಗಗಳು ವ್ಯಾಪಕವಾಗಿ ಹಬ್ಬುತ್ತವೆ. ಈ ರೋಗಗಳನ್ನು ತಡೆಗಟ್ಟುವುದಕ್ಕೆ ಆರೋಗ್ಯ ಇಲಾಖೆಯವರು ಈ ೬ ತಾಲ್ಲೂಕುಗಳಲ್ಲಿ ಈಗ ಏನು ಕ್ರಮ ತೆಗೆದುಕೊಂಡಿದ್ದಾರೋ ಅದು ಏನೇನೂ ಸಾಲದು. ಈ ೬ ತಾಲ್ಲೂಕುಗಳಲ್ಲಿ ೫,೭೧೭ ಜನರಿಗೆ ಕಾಲರ ಚುಚ್ಚುಮದ್ದನ್ನು ಹಾಕಲಾಗಿದೆಯೆಂದು ಹೇಳಿದ್ದಾರೆ. ೬ ತಾಲ್ಲೂಕುಗಳಲ್ಲಿ ಬರೀ ೫,೭೧೭ ಜನರು ಮಾತ್ರವೇನಾ ಇರುವುದು ? ಲಕ್ಷಾಂತರ ಜನಗಳು ಇದ್ದಾರೆ. ಇಷ್ಟು ಕಡಿಮೆ ಪ್ರಮಾಣದಲ್ಲಿ ಚುಚ್ಚುಮದ್ದುಗಳನ್ನು ಹಾಕಿರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಜನಗಳಿಗೆ ಚುಚ್ಚುಮದ್ದುಗಳನ್ನು ಕೊಡುವುದಕ್ಕೆ ಔಷಧಿಗಳ ಸರಬರಾಜು ಇಲ್ಲವೆಂದು ನನ್ನ ಭಾವನೆಯಾಗಿದೆ. ಆಮೇಲೆ, ಇವರು ಕ್ರಿಮಿನಾಶಕ ಕ್ರಮವನ್ನು ಕೇವಲ ೧೯೯ ಮನೆಗಳಲ್ಲಿ ಮಾತ್ರ ತೆಗೆದುಕೊಂಡಿದ್ದಾರೆ. ಓ.ಆರ್.ಎಸ್ ಪ್ಯಾಕೆಟ್‌ಗಳನ್ನು ೫೦೦ ಮಾತ್ರ ಸಪ್ಲೈ ಮಾಡಿದ್ದಾರೆ. ಈ ಓ.ಆರ್.ಎಸ್ ಪೌಡರನ್ನು ಒಂದು ಕೊಡ ನೀರಿಗೆ ಹಾಕಿ ಸ್ವಲ್ಪ ಹೊತ್ತು ಬಿಟ್ಟು ಉಪಯೋಗಿಸಬೇಕೆಂಬ ನಿಯಮ ಇದೆ. ಇವರು ಕೊಟ್ಟಿರುವ ೫೦೦ ಪ್ಯಾಕೆಟ್‌ಗಳು ಎಷ್ಟು ಜನರಿಗೆ ಕೊಡುವುದಕ್ಕೆ ಆಗುತ್ತದೆ ? ಆರೋಗ್ಯ ಇಲಾಖೆಯವರು ಈ ಪೌಡರನ್ನು ಜನರುಗಳಿಗೆ ಹೆಚ್ಚು ಪ್ರಮಾಣದಲ್ಲಿ ಕೊಡಬೇಕು. ಕ್ರಿಮಿನಾಶಕಗಳನ್ನು ಹೆಚ್ಚು ಪ್ರಮಾಣದಲ್ಲಿ ಜನರುಗಳಿಗೆ ಕೊಟ್ಟಿದ್ದಿದ್ದರೆ ಇವರುಗಳು ತಮ್ಮ ಮನೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಸಿಂಪರಣೆ ಮಾಡಬಹುದಾಗಿತ್ತು. ಆದರೆ ಇವರು ಸರಿಯಾದ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಸಪ್ಲೈ ಮಾಡಿಲ್ಲ. ಹಂದಿಗಳನ್ನು ನಿರ್ಮೂಲ ಮಾಡಬೇಕೆಂದು ಹೇಳಲಾಗಿದೆ. ಆದರೆ, ಹಂದಿಗಳ ನಿರ್ಮೂಲನೆ ಬಗ್ಗೆಯೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಮೆದುಳು ಜ್ವರವನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಔಷಧಿಗಳನ್ನು ಸಪ್ಲೈ ಮಾಡಿದೆಯೋ ಅದು ಏನೇನು ಸಾಲದು. ದಯಮಾಡಿ ಹೆಚ್ಚು ಔಷಧಿಗಳನ್ನು ಪ್ರತಿ ತಾಲ್ಲೂಕಿನಲ್ಲಿರುವ ಎಲ್ಲಾ ಆರೋಗ್ಯ ಘಟಕಗಳಿಗೂ ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಈಗ ನನಗೆ ಕೊಟ್ಟಿರುವ ಅಂಕಿ ಅಂಶಗಳು ಎಂಟು ಹತ್ತು ದಿನಗಳ ಹಿಂದಿನದು ಎಂದು ಕಾಣುತ್ತದೆ. ಈಗ ರೋಗಗಳು ಇನ್ನೂ ಉಲ್ಬಣಗೊಂಡಿವೆ. ಈ ರೋಗಗಳನ್ನು ತಕ್ಷಣ ತಡೆಗಟ್ಟುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿರತಕ್ಕ ಪಟ್ಟಿಯಲ್ಲಿ ೧೨ ಸಾವುಗಳು ಆಗಿವೆ ಎಂದು ತಿಳಿಸಲಾಗಿದೆ. ಬಹುಶಃ ಈ ಸಂಖ್ಯೆ ಸರಿಯಿಲ್ಲವೆಂದು ನನ್ನ ಭಾವನೆ ನಾನು ಗುಬ್ಬಿ ತಾಲ್ಲೂಕಿಗೆ ಹೋಗಿದ್ದಾಗ ಅಲ್ಲಿ ಸಾವುಗಳು ಆಗಿರತಕ್ಕ ಸ್ಥಳಗಳನ್ನು ನಾನು ಕಂಡಿದ್ದೇನೆ. ಔಷಧಿಗಳನ್ನು ಕಳುಹಿಸಿಕೊಡಲಾಗಿದೆ ಎಂದು ಸಹ ಹೇಳಿದ್ದಾರೆ. ೧೯೮೭ರ ವರ್ಷಾಚರಣೆ ಒಂದು ಪೈಸೆ ಬೆಲೆಯ ಔಷಧಿಗಳನ್ನೂ ಗುಬ್ಬಿ ಆಸ್ಪತ್ರೆಗೆ ಸಂಬೂರು ಮಾಡಿಲ್ಲ.

೧-೧೧-೧೯೮೭ಕ್ಕೆ ಔಷಧಿಯನ್ನು ಕೊಟ್ಟಿದ್ದೀರಿ ಎಂದು ತಾವು ಹೇಳಿದ್ದೀರಿ. ಆದರೆ ನನ್ನ ಗುಬ್ಬಿ ಆಸ್ಪತ್ರೆಗೆ ಔಷಧಿಗಳು ಬಂದಿಲ್ಲ. ನನಗೆ ಗೊತ್ತಿರುವ ಹಾಗೆ ಈ ಅವಧಿಯಲ್ಲಿ ಒಂದು ಪೈಸೆಯ ಔಷಧಿಯನ್ನಾದರೂ ಕೂಡ ಕಳುಹಿಸಿಲ್ಲ. ಹೀಗೆ ಸರಬರಾಜನ್ನು ಸೂಕ್ತ ಕಾಲದಲ್ಲಿ ಸೂಕ್ತ ಪ್ರಮಾಣದಲ್ಲಿ ಮಾಡದಿದ್ದರೆ ವೈದ್ಯರು ಆ ಪ್ರದೇಶದಲ್ಲಿ ರೋಗವನ್ನು ತಡೆಗಟ್ಟಲು ಹೇಗೆ ಸಾಧ್ಯವಾಗುತ್ತದೆ? ಡಾಕ್ಟರ್ ತಮ್ಮ ಸ್ವಂತ ಹಣವನ್ನು ಕೊಟ್ಟು ಔಷಧಿಯನ್ನು ತಂದುಕೊಟ್ಟರೆ ಅದು ಒಂದು ರೀತಿಯಲ್ಲಿ ವ್ಯಾಪಾರವಾಗುತ್ತದೆ ಮತ್ತು ಅದು ಅಸಾಧ್ಯವೂ ಆಗಿದೆ. ಈ ಸಾಂಕ್ರಾಮಿಕ ರೋಗಗಳು ಹರಡದ ಹಾಗೆ ನೋಡಿಕೊಳ್ಳುವುದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದಲ್ಲಿ. ಮೆದುಳು ಜ್ವರ ಹರಡದ ಹಾಗೆ ಸಾಕಷ್ಟು ಪ್ರಮಾಣದಲ್ಲಿ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ವಿಚಾರ

ಬಂದಾಗ ಯಾವ ಅಧಿಕಾರಿಯೂ ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ರೋಗವು ಈಗ ತುಮಕೂರಿಗೆ ಕೂಡ ಹಬ್ಬಿದೆ. ಮುಂದಿಗೇಂದ ಬರುವ ಈ ಕಾಯಿಲೆಯನ್ನು ಯಾವ ರೀತಿಯಲ್ಲಿ ತಡೆಗಟ್ಟಬೇಕೋ ಆ ರೀತಿಯಲ್ಲಿ ತಡೆಗಟ್ಟುವ ಬಗ್ಗೆ ಸೂಕ್ತ ಕಾರ್ಯಗಳು ನಡೆಯುತ್ತಿಲ್ಲ. ಪೊಡಲಂ ವಿಮದುಳು ಗ್ವರವುನಮ್ಮ ಭಾಗದಲ್ಲಿ ಇರಲಿಲ್ಲ. ಕೇವಲ ಬಯಲು ಸೀಮೆಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿತ್ತು. ಈ ಬಗ್ಗೆ ಸೂಕ್ತ ಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳುವುದರ ಜೊತೆಗೆ ಈ ಬಗ್ಗೆ ತಾವು ಕೊಟ್ಟ ಅಂಕಅಂಶಗಳು ಕೂಡ ಸರಿಯಾಗಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ — ಮಾನ್ಯ ಸದಸ್ಯರಾದ ಲಕ್ಕಪ್ಪನವರು ಮಾತನಾಡುತ್ತಾ ಆರೋಗ್ಯ ಇಲಾಖೆಯಿಂದ ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗಿದ್ದಲ್ಲಿ ಇಷ್ಟೊಂದು ಅಂಕಿ ಅಂಶಗಳನ್ನು ಮತ್ತು ಈ ರೀತಿಯಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ರೋಗಗಳನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಾ ಇರಲಿಲ್ಲ. ಎರಡನೆಯದಾಗಿ ಬಡಾರ ಮತ್ತು ಅತಿಸಾರ ಈ ಬಿದಿಯೂ ಕೂಡ ಇತ್ತು. ನಾನು ಮಧುಗಿರಿ ತಾಲ್ಲೂಕಿಗೆ ಆಲ್ಲಿ ಈ ಕಾಯಿಲೆ ಆಗಿದ್ದಾಗ ಹೋಗಿದ್ದೆನಂ. ಎಲ್ಲಿ ಇಂತಹ ರೋಗ ಕಾಣಿಸಿಕೊಳ್ಳುತ್ತದೋ ಅಂತಹ ಕಡೆಗಳಲ್ಲಿ ತ್ವರಿತವಾಗಿ ಲಸಿಕೆಗಳನ್ನು ಕಳುಹಿಸಿಕೊಡುವಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಎಲ್ಲೆಲ್ಲಿ ಔಷಧಿಗಳು ಬೇಕಾಗುತ್ತದೋ ಅಲ್ಲಿಗೆ ತಕ್ಷಣ ಔಷಧಿಯನ್ನು ಕಳುಹಿಸುವ ವ್ಯವಸ್ಥೆ ಮಾಡಿದ್ದೇನೆ. ಗುಬ್ಬಿ ತಾಲ್ಲೂಕಿಗೆ ೧೯೮೭ನೇ ಇಸವಿಯಲ್ಲಿ ಔಷಧಿಯನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳ ವ್ಯವಸ್ಥೆಯಾದ ಮೇಲೆ ಶೆಂ ಪರ್ಸೆಂಟ್‌ನಷ್ಟು ಔಷಧಿಯನ್ನು ಅವರೇ ಕೊಂಡು ಕೊಳ್ಳುವುದಕ್ಕೆ ವ್ಯವಸ್ಥೆಯಾಗಿದೆ. ಉಳಿದ ೬೦ ಪರ್ಸೆಂಟ್‌ನಷ್ಟು ಔಷಧಿಯನ್ನು ಕೇಂದ್ರ ಮಂತ್ರಿಗಳಿಂದ ನಾವು ಸರಬರಾಜು ಮಾಡುತ್ತಿದ್ದೇವೆ. ಒಂದು ವೇಳೆ ಇಂತಹ ಕ್ರಮದಲ್ಲಿ ಲೋಪವಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಹೇಳಿದ ಹಾಗೆ ಹುಳಿಗಳ ನಿಯಂತ್ರಣ ಮಾಡುವುದಕ್ಕೆ, ಕೇಂದ್ರ ಸರಕಾರವೂ ಕೂಡ ಪ್ರಯತ್ನ ಮಾಡಿದೆ. ಈ ರೋಗಕ್ಕೆ ಕಾರಣವಾದ ಯಾವ ಪ್ರಾಣಿಯ ಮೇಲೆ ಈ ಒಂದು ಕ್ರಿಮಿ ಇರುತ್ತದೆ ಎಂದು ತಿಳಿದುಕೊಳ್ಳುವಲ್ಲಿ ಅದು ಪ್ರಯತ್ನಿಸುತ್ತಿದ್ದು ಅದು ನಿರ್ದಿಷ್ಟವಾಗಿ ತಿಳಿದಿಲ್ಲ ಕೆಲವು ಕಡೆಗಳಲ್ಲಿ ಎಮ್ಮೆಗಳ ಮೇಲೆಯೂ ಇಂತಹ ಕ್ರಿಮಿಗಳು ಇರುವ ಬಗ್ಗೆ ವರದಿ ಇದೆ. ನಮ್ಮಲ್ಲಿ ಹುಂದಿಗಳನ್ನು ನಿಯಂತ್ರಣ ಮಾಡುವುದಕ್ಕೆ ಕೊಳಚೆ ನೀರು ಇರುವ ಪ್ರದೇಶಗಳಲ್ಲಿ ಸೊಳ್ಳೆಗಳನ್ನು ತಡೆಗಟ್ಟುವುದಕ್ಕೆ ಅವುಗಳು ಹರಡದ ಹಾಗೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಆ ದಿಸೆಯಲ್ಲಿ ಫಿನೈಲ್ ಮುಂತಾಗಿ ನಿರೋಧಕ ಔಷಧಿಯನ್ನು ಸಿಂಪಡಿಸುವ ಕ್ರಮಗಳ ಮೂಲಕ ಸಾಕಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ. ಹುಂದಿಗಳನ್ನು ಊರ ಜೊಂಗೆ ಸಾಕುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಆ ಬಗ್ಗೆ ಎಲ್ಲರ ಸಹಕಾರ ಮತ್ತು ಸಹಾಯ ಬೇಕಾಗುತ್ತದೆ.

ಶ್ರೀ ಬಿ. ಲಕ್ಕಪ್ಪ — ಈ ರೀತಿಯಲ್ಲಿ ಔಷಧಿಯನ್ನು ಸರಬರಾಜು ಮಾಡತಕ್ಕಂಥ ಒಂದು ವ್ಯವಸ್ಥೆ ೧೯೭೭ರವರೆಗೆ ಜಿಲ್ಲಾ ವರಿಷತ್ತಿನವರಿಗೆ ಇರಲಿಲ್ಲ. ರಾಜ್ಯ ಸರಕಾರದವರೇ ಸರಬರಾಜು ಮಾಡತಕ್ಕಂಥ ವ್ಯವಸ್ಥೆಯು ಇತ್ತು. ನಮ್ಮಲ್ಲಿಗೆ ೧೯೭೭-೭೮ರವರೆಗೆ ಯಾವುದೇ ಔಷಧಿ ಸರಬರಾಜು ಇದು ತನಕ ಆ ಲ್ಲ. ನಾನು ಶಿವಮೊಗ್ಗಕ್ಕೆ ಹೋಗಿದ್ದಾಗ ಅಲ್ಲಿಯ ವೈದ್ಯರುಗಳು ಕೂಡ ಇದೇ ವಿಚಾರವನ್ನು ಹೇಳಿದರು. ತಾವು ಜಿಲ್ಲಾಪರಿಷತ್ತಿಗೆ ಕೊಟ್ಟ ಅಧಿಕಾರದ ಬಗ್ಗೆ ಹೇಳಿದ್ದೀರಿ. ಒಂದು ವೇಳೆ ನಿಮ್ಮ ಹತ್ತಿರ ಯಾವುದೇ ಪೈಮರಿ ಹೆಲ್ತ್ ಸೆಂಟರ್‌ನವರಿಗೆ ಔಷಧ ಸರಬರಾಜು ಮಾಡಿದ ಬಗ್ಗೆ ಮಾಹಿತಿಗಳು ಇದ್ದರೆ ಆ ಮಾಹಿತಿಗಳನ್ನು ನಮಗೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.— ಆ ಮಾಹಿತಿಗಳು ಈಗ ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು.— ಶ್ರೀಯುತರುಗಳಾದ ಕೆ. ವಿ. ರವೀಂದ್ರನಾಥಬಾಬು, ವಲ್ಲಾರಿಗೌಡ ಎಸ್. ಪಾಟೀಲ್ ಮತ್ತು ವಾರ್ಕಯ್ಯ ವಿ. ಗುತ್ತೇದಾರ್ ಆವರುಗಳು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಈಗ ಮಂಡಿಸಬಹುದು.